**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕಃ 11-12-2019

**ಪಾಟೀ ಸವಾಲು** ಃ-- ಶ್ರೀ ಎಮ್.ಆರ್.ಸಿ 2 ನೇ ಪ್ರತಿವಾದಿಯ ಪರ ವಕೀಲರಿಂದ

ವಾದಿಯರು ನನ್ನ ಸಂಬಂಧಿಕರಲ್ಲ, ನೆರೆಹೊರೆಯವರು. 1 ನೇ ಪ್ರತಿವಾದಿಗೆ ಒಬ್ಬ ಸಹೋದರ ಇದ್ದಾನೆ, ಸಹೋದರಿಯರು ಇರುವ ಬಗ್ಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂಬುದು ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಆತನ ಸಹೋದರರ ಮಧ್ಯೆ ವಿಭಾಗವಾಗಿದೆ. ಸುಮಾರು 30-40 ವರ್ಷಗಳ ಹಿಂದೆಯೇ ವಿಭಾಗವಾಗಿದೆ. ದಾವಾಸ್ತಿಗಳ ಸರ್ವೆ ನಂ.ಗೊತ್ತಿಲ್ಲ. 1 ನೇ ವಾದಿಗೆ ತಾಯಿ ಇಲ್ಲ ಎಂದರೆ ಸರಿ. 1 ನೇ ವಾದಿಯ ತಾಯಿ ಸುಮಾರು 8-10 ವರ್ಷಗಳ ಹಿಂದೆ ಪೌತಿಯಾಗಿದ್ದಾರೆ. ತಾಯಿ ಪೌತಿಯಾದ ಸಮಯದಲ್ಲಿ 1 ನೇ ವಾದಿಗೆ 15 ವರ್ಷ ಹಾಗೂ 2 ನೇ ವಾದಿಗೆ 10 ವರ್ಷ ವಯಸ್ಸು ಇತ್ತು. ವಾದಿಯರನ್ನು ಮೊದಲಿನಿಂದ 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾನೆಂದರೆ ಸರಿಯಲ್ಲ. ತಾಯಿ ಪೌತಿಯಾಗುವವರೆಗೆ ವಾದಿಯರು ತಾಯಿಯೊಂದಿಗೆ ವಾಸವಾಗಿದ್ದು, ಈಗ ತಮ್ಮ ಕೆಲಸದ ನಿಮಿತ್ತ ಬೇರೆ ಕಡೆ ವಾಸವಾಗಿದ್ದಾರೆ. ವಾದಿಯರು ವಿದ್ಯಾವಂತರು ಎಂದರೆ ಸ್ವಲ್ಪ ಶಿಕ್ಷಣ ಆಗಿದೆ ಎಂದು ನುಡಿಯುತ್ತಾರೆ. 1 ನೇ ವಾದಿಯು ಬೆಂಗಳೂರಿನಲ್ಲಿ ಹಾಗೂ 2 ನೇ ವಾದಿಯು ಚನ್ನರಾಯಪಟ್ಟಣದಲ್ಲಿ ವಾಸವಾಗಿದ್ದಾನೆ. ಗುಜುಮಾರನಹಳ್ಳಿಯಲ್ಲಿ ವಾದಿಯರು ಮತ್ತು 1 ನೇ ಪ್ರತಿವಾದಿ ಮನೆಕಟ್ಟಿದ್ದಾರೆಂದರೆ ಸರಿಯಲ್ಲ, 1 ನೇ ಪ್ರತಿವಾದಿಯ ತಮ್ಮ ಕಟ್ಟಿದ್ದಾನೆ.

ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಗ್ರಾಮದಲ್ಲಿ ಯಾವುದೇ ಪಂಚಾಯಿತಿ ಮಾಡಿಲ್ಲ. ಪಂಚಾಯಿತಿ ಮಾಡಿದ ಬಗ್ಗೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ . 1 ನೇ ಪ್ರತಿವಾದಿಯು ವ್ಯವಸಾಯ ಮಾಡುತ್ತಾನೆ. ದಾವಾಸ್ತಿಗಳ ಕುರಿತು ಆದ ಕ್ರಯಪತ್ರಗಳ ಬಗ್ಗೆ ಮಾಹಿತಿ ಇಲ್ಲ . 1 ನೇ ಪ್ರತಿವಾದಿ ಎಷ್ಟು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆಂಬುದು ಗೊತ್ತಿಲ್ಲ. ಐಟಂ ನಂ.4 ಆಸ್ತಿಯ ಸರ್ವೆ ನಂಬರ್, ವಿಸ್ತೀರ್ಣ ಹಾಗೂ ಚೆಕ್ಕುಬಂಧಿ ಗೊತ್ತಿಲ್ಲ. ಐಟಂ ನಂ.4 ಆಸ್ತಿ ಈಗ ಯಾರ ಸ್ವಾಧೀನದಲ್ಲಿದೆ ಎಂಬುದು ಗೊತ್ತಿಲ್ಲ. ಸದರಿ ಆಸ್ತಿಯ ಕಂದಾಯವನ್ನು 1 ನೇ ಪ್ರತಿವಾದಿ ಮತ್ತು ಆತನ ಸಹೋದರ ಕಟ್ಟುತ್ತಿದ್ದಾರೆ. ವಾದಿಯರ ಕುಟುಂಬದ ಬಗ್ಗೆ ಹಾಗೂ ದಾವಾಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ವಾದಿಯರ ಮಾತುಕೇಳಿ ಪ್ರತಿವಾದಿಯರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ಮತ್ತು 1 ನೇ ಪ್ರತಿವಾದಿ ಈಗಾಲೂ ಒಟ್ಟಾಗಿ ವಾಸವಾಗಿದ್ದಾರೆಂದರೆ ಸರಿಯಲ್ಲ. ವಾದಿಯರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

2 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ